WONDERFUL REMEDY
for all Digestive Troubles
A speciality in gastric ulsers, duedamal ulcers. Radical cure guaranteed. Apply to—
S. Lingai Gowda
Kurubar Street, Kollegal

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore

Regd No. M. 1299 ವಾರಪತ್ರಿಕೆ ೬ ಪೈಸೆ

Weekly SATYAVADI Founded 1917

ಸತ್ಯವಾದಿ

ಸಂಚಿಕೆ 26) ಶನಿವಾರ 26—12—1942 (ಸಂಪುಟ 81

— ಗುಲ್ಮ —

ಎಲ್ಲಾ ತರಹದ ಜೀರ್ಣಕೋಶದ ವ್ಯಾಧಿಗಳಿಗೆ (ಹೊಟ್ಟೆ ನೋವು, ತೇಗು, ಎದೆ ನೋವು, ವಿಷೂರಿ, ಪಕ್ಕಶೂಲೆ, ವಾಂತಿ ಬಾಯಿ. ನೀರು) ಇವುಗಳಿಗೆಲ್ಲಾ ನಮ್ಮಲ್ಲಿ ಖಾತಿ ಯಾದ ಔಷಧಿ ದೊರೆಯುತ್ತದೆ. ಅಪೇಕ್ಷಿಸುವವರು ಚಿಹ್ನೆಗಳನ್ನು ಕುರಿತು 0-1-6 ಸ್ಟಾಂಪಿನೊಡನೆ ಬರೆಯಿರಿ.

ಎಸ್. ಲಿಂಗೇಗೌಡ,
ಕುರುಬರ ಬೀದಿ, ಕೊಳ್ಳೇಗಾಲ

ಇನ್ನು ಕ್ಷೌರ ಕಡಿಮೆಯೇ?

ಈಗ ಎಲ್ಲಿ ನೋಡಿದರೂ ಬ್ಲೇಡಿನ ಬೆಲೆ ಏರಿಮಿಾರಿದೆ ಹಿಂದೆ ಅರು ಕಾಸಿಗೆ ದೊರೆಯುತ್ತಿದ್ದ ಬ್ಲೇಡು ಈಗ ಆರಾಣೆ ಯಾಗಿದೆ, ನನ್ನ ಸ್ನೇಹಿತರೊಬ್ಬರು ಕೇಳಿದರು— "ಇನ್ನು ಮೇಲೆ ಯುದ್ಧ ಮುಗಿಯುವವರೆಗೂ ಕ್ಷೌರವನ್ನು ಮಾಡಿಸಿಕೊಳ್ಳುವುದಿಲ್ಲ. ಹೀಗೆ ಮಾಡುವುದು ಕೂಡ ನನಗೆ ಸರಿಯೆಂದೇ ತೋರಿತು. ಈಗ ನಾವು ತಿಂಗಳಿಗೆ ಎಷ್ಟೋ ಬ್ಲೇಡನ್ನು ಉಪಯೋಗಿಸುತ್ತಿರುತ್ತೇನೆ. ಇದರಿಂದ ಎಷ್ಟು ಕಬ್ಬಿಣ ನಷ್ಟ, ಈ ಕಬ್ಬಿಣವಿದ್ದರೆ ಯುದ್ಧವು ಇದುವರೆಗೆ ಮುಗಿಯುತ್ತಿರಲಿಲ್ಲವೆ? ಪೂರ್ವದಲ್ಲಿ ನಮ್ಮ ಋಷಿಗಳ ಗಡ್ಡವಿನ್ಯಾಸಗಳನ್ನು ಬೆಳೆಸುತ್ತಿರಲಿಲ್ಲವೆ? ಗ್ರೀಸರು ರೋಮರೂ ಸಹಾ ಗಡ್ಡ ಬೆಳೆಸುತ್ತಿದ್ದರು. ಕ್ರಿ. ಪೂ. 300 ರಲ್ಲಿ ರೋಮನರು ಸಿಸಿಲಿಯಿಂದ ಕ್ಷೌರದ ರಪ್ಪುಕರೆಯಿಸಿ ಗಡ್ಡಗಳನ್ನು ಬೋಳಿಸಲು ಪ್ರಾರಂಭಿಸಿದರು. ಪ್ರಖ್ಯಾತ ಅಲೆಕ್ಸಾಂಡರನು ತನ್ನ ಸೈನಿಕರೆಲ್ಲರೂ ಗಡ್ಡಬಿಡಕೂಡದೆಂದು ಆಜ್ಞೆ ಮಾಡಿದನು. ಕಾರಣ, ಎಲ್ಲಿ ತನ್ನ ಶಿರಸ್ತ್ರಾಣಗಳನ್ನು ಶತ್ರುಗಳು ಗಡ್ಡ ಹಿಡಿದು ಎಳೆದುಕೊಂಡು ಹೋಗಬಹುದೆಂದು! ಇದರಿಂದ ಕ್ಷೌರಮಾಡಿಸಿಕೊಳ್ಳುವುದು ಆಗಿನಿಂದ ಆರಂಭವಾಯಿತು. ಇಂಡಿಯಾದಲ್ಲಿ ಪೊರ್ಚುಗೀಸ್ ಅಡ್ಮಿರಲ್ ಜೇರ್ಡಿ ಕನ್ಹಾಪ್ಟ್ರೀ ಒಮ್ಮೆ ದೊಡ್ಡದಾಗಿ ಗಡ್ಡಬಿಟ್ಟಿದ್ದನು. ಈ ಗಡ್ಡವನ್ನು ಬಹಳವಾಗಿ ಬೆಳೆಸುವುದಕ್ಕೆ ವಿಶೇಷವಾಗಿ ದ್ರವ್ಯ ಖರ್ಚು ಮಾಡಿದ್ದನು. ತನಗೆ ಗ್ರಹಣ ಬೇಕಾದ್ದರಿಂದ ಕ್ರಿ. ಗಡ್ಡವನ್ನು ಕತ್ತರಿಸಿ, ಅದನ್ನು ಅನ್ಯ ದೇಶದ ಪಣಿಗಾರರಿಗೆ ಕೊಡಿಸಿ, ಇದಕ್ಕಿಂತಲೂ ಆಧಾರ ಬೇಕೇ ಎಂದು ಬರೆದನಂತೆ, ಹಣವೂ ಕೂಡಲೇ ಒಂದು ಸೇರಿತು.

ಅಮೇರಿಕಾದಲ್ಲಿ ಸಾಕ್ಷಿಫಾರ್ಕಸಿ ಸೆಕ್ಸೀ ಮೆನ್ ಕ್ಲಬ್ ಎಂಬ ಒಂದು ಸಂಘವಿದೆ. ಅದರಲ್ಲಿ ವೆಂಬರಗಳು, ಯುದ್ಧ ಮುಗಿಯುವವರೆಗೂ ಕ್ಷೌರಮಾಡಿಸಿಕೊಳ್ಳಕೂಡದೆಂದು ಪ್ರತಿಜ್ಞೆ ಮಾಡಿ ವೆಂಬರಾಗಿ ಸೇರಬೇಕು.

ಜಪಾನು ಚಕ್ರವರ್ತಿಯು ಒಬ್ಬ ಖೈದಿಯಾಗಿದ್ದಾನೆ!

"ಸ್ಪಾರ್ಟಕಸ್ ವಾಜ್" ಪತ್ರಿಕೆಯು ಹೀಗೆ ತಿಳಿಸಿದೆ—ಜಪಾನ್ ಚಕ್ರವರ್ತಿಯು ತನ್ನ ಅರಮನೆಯಲ್ಲಿಯೇ ಖೈದಿಯಾಗಿರುವನಂತಿರುವನೆನ್ನಬಹುದು. ಜನರಲ್ ಟೋಜೋ ಸರ್ವಾಧಿಕಾರಿಯಾಗಲು ಯತ್ನಿಸುತ್ತಿರುವನು.

ಚಕ್ರವರ್ತಿಯು ತನ್ನ ಸಮಸ್ತವನ್ನು ಸೈನ್ಯದವರಿಗೆ ಒಹುಮಾನಗಳನ್ನು ಏರಿಯೋಗ ಮಾಡುವುದರಲ್ಲಿಯೂ, ಯುದ್ಧದಲ್ಲಿ ವಡಿದ ಪಿತೃಗಳ ಆಲಯುಗಳನ್ನು ದರ್ಶಿಸುವದರಲ್ಲಿಯೂ ಕಳೆಯುವನು. ಆತನು ವರ್ತಮಾನ ಪತ್ರಿಗಳನ್ನು ಪೂರ್ಣರೀತಿಯಲ್ಲಿ ಓದಲು ಅವಕಾಶವಿಲ್ಲ. ಆ ವೃಗಳಲ್ಲಿ ಕೆಲವು ಭಾಗಗಳು ಮಾತ್ರ ಆತನಿಗೆ ಕಳುಹಿಸಲ್ಪಡುವುವು "ಕ್ಷೌರದ ಕತ್ತಿ"ಯೆಂಬ ಹೆಸರಿನಿಂದ ಜಪಾನಿನ ಕಾರ್ಯವನ್ನು ಜನರಲ್ ಟೋಜೋವಿನ ವಶಕ್ಕೆ ದಿನೇ ದಿನೇ ಹೆಚ್ಚು ಅಧಿಕಾರವು ಬರುತ್ತಿದೆ.

ಜಪಾನಿನ ಪ್ರಥಮ ಸರ್ವಾಧಿಕಾರಿಯಾಗಲು ಸಾಕಷ್ಟು ಅಧಿಕಾರವನ್ನು ಪಡೆಯುವೆಂಬುದೇ ಟೋಜೋ ಆಶಯವಾಗಿದೆ. ಈ ಉದ್ಯಮದಲ್ಲಿ ಟೋಜೋ ಜಯಶೀಲನಾದರೆ ಚಕ್ರವರ್ತಿಗಿಂತ ಹೆಚ್ಚು ಅಧಿಕಾರವನ್ನು ಪಡೆದಂಥಾವನಾಗುವನು. ಈಗಾಗಲೆ ಆತನು ಚಕ್ರವರ್ತಿಯನ್ನು ಅನಪೇಕ್ಷಿಯಿಂದ ಕಾಣುತ್ತಿರುವನು.

ಟೋಜೋವಿನ ಚಿತ್ರವು ದಿನಂಪ್ರತಿ ಅಲ್ಲಿಯ ವರ್ತಮಾನ ಪತ್ರಿಕೆಗಳಲ್ಲಿ ಕಾಣಿಸುವುದು. ಆತನು ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಿರುವಿಕೆ, ಬೀದಿಯಲ್ಲಿ ಹೋಗುವ ಮುದಿ ಹೆಂಗಸರಿಗೆ ಸಹಾಯ ಮಾಡುವಿಕೆ ಇತ್ಯಾದಿ ಚಿತ್ರಗಳು ಅವುಗಳಲ್ಲಿ ಪ್ರದರ್ಶಿಸಲ್ಪಡುವವು. ಟೋಜೋ ತನ್ನ ಭಾಷಣಗಳಲ್ಲಿ ತಾನು ಕಾಲವನ್ನು ನ ಸರಿಸಿ ಕೆಲಸಮಾಡುವಂಥವನೆಂಬ ವಿಷಯವನ್ನು ಸ್ಪಷ್ಟಪಡಿಸುವನು. ಜಪಾನಿನ ಜಯವೇ ತನ್ನ ಧ್ಯೇಯವೆಂದು ತಿಳಿಸುವನು.

(ದಿ ವ್ಹಿಸ್)

ಯೂಜೋಷಿನ ಕೋಟ್ಯಾಧೀಶ್ವರು

ಹಿಟ್ಲರಾನ ಹಂಗಿಗೆ ಸಿಗದೆ ಅನೇಕ ಲಕ್ಷಾಧಿಪತಿಗಳೂ, ಭಾರಿ ವರ್ತಕರೂ ರಾಜವರ್ಗದವರೂ ಅಮೇರಿಕಾ ಸೇರಿರುವರು.

18000000000 ರೂಪಾಯಿ ಸಂಪತ್ತಿಗೆ ಸಿಗದು ಒಡೆಯರಾಗಿಲ್ಲಿ ತಂದಿರುವವರು. ಇವರಲ್ಲಿ ಎಸ್ ಎಫ್ ನೋರ್ಟರ್ ಒಬ್ಬರು. ಇವರು ತಸಿಬೆ ಮಾಡಿದ್ದಲ್ಲಿ ಇಷ್ಟು ಐಶ್ವರ್ಯವು ಒಂದು ಖಂಡದಿಂದ ಮತ್ತೊಂದು ಖಂಡಕ್ಕೆ ಯಾವಾಗಲು ಸೇರಿಲ್ಲ. ಈ ಕೋಟ್ಯಾಧೀಶ್ವರರು ನ್ಯೂಯಾರ್ಕಿನ ಹೋಟೆಲ್‌ಗಳಲ್ಲಿ ವಾಸ ಮಾಡುವರು. ಅಲ್ಲಿ ಬಾಡಿಗೆಯು ಶೇಕಡ 10 ರಿಂದ 40 ರವರೆಗೆ ಹೆಚ್ಚಿದೆ. ಅವರ ಸೈಟ್-ಕ್ಲಬ್ಬಿನ ಬಲ್ಲ 300-15 ರೂ ಸಾಯಿ ಸ್ಥಳಾಂತರಿಸಿದೆ. ಅನೇಕರು ಅಮೇರಿಕಾ ವಿಕಾರ ಸ್ಥಳಗಳಲ್ಲಾ ಇನಂದೇ, ಬರ್ಮನಿಯಿಂದ ತಮ್ಮ ಐಶ್ವರ್ಯವನ್ನು ಸಾಗಿಸಲು ಒಬ್ಬ ಬಾಲಕ ಶ್ರೀಮಂತನು ತನ್ನ ಆಭರಣವನ್ನೆಲ್ಲಾ ಕನ್ನ ದಸಕರುಗಳಿಗೆ ತಿನ್ನಿಸಿದನು. ಗಡಿಪಬ್ಬ ಕೂಡಲೆ ಅದನ್ನೆಲ್ಲಾ ಹೊರಗೆ ಆಭರಣವನ್ನು ತೆಗೆದುಕೊಂಡನು. ಮತ್ತೊಬ್ಬನು ತನ್ನ ಐಶ್ವರ್ಯಕ್ಕೆಲ್ಲಾ ಬಾಗಿ ಬಿಳಿದ ನೋಡಿದರೆ ಅದು ಇಜ್ಜಲೇ ಅನ್ನುವ ಹಾಗೆ ಮಾಡಿ ಗಡಿಪಬ್ಬ ಬಂದನು.

ಶುದ್ಧ ಸುಳ್ಳು

ಕಾಂಗ್ರೆಸ್ಸಿನ ವಿರುದ್ಧ ಆರೋಪ ಹೊರಿಸಿ ಬರೆದ "ಡೈಲಿಹೆರಾಲ್ಡಿನ" ವಿಚಾರಗಳನ್ನು ಪ್ರತಿಭಟಿಸುತ್ತ ಶ್ರೀ ಕೆ. ಎಂ. ಮುನ್ಷಿಗಳು "ಕಾಂಗ್ರೆಸ್ಸಿನವರ ಸಹಕಾರಕ್ಕಾಗಿ ಪ್ರತಿಯಾಗಿ ಜಪಾನಿಯರು ಕಾಂಗ್ರೆಸ್ಸಿಗೆ ಇಂಡಿಯಾ ಸರಕಾರದ ಸರಕಾರದ ಸರ್ವಾಧಿಕಾರದ ಸ್ಥಾನವನ್ನೂ ವಾಗ್ದಾನ ಮಾಡಿರುವರು" ಎಂಬೀ ರಾಲ್ಡ್‌ನ ಆರೋಪವು ಶುದ್ಧ ಸುಳ್ಳು ಎ ದಿರುವರು.

ದಿ ಸೆಂ ಟಿ ಲಿಸ್ಕೆ ಡ್
ಆಮ್ಲತುಂಬಿ
ಅತಿಸಾರಕ್ಕೆ
ಸಂಜೀವನ
ಪ್ಯಾಕೆಟ್ ಒಂದಕ್ಕೆ ೨ ಆಣೆ
ಎಲ್ಲಾ ಕೆಮಿಸ್ಟ್‌ಗಳಲ್ಲಿಯೂ ದೊರೆಯುತ್ತ

ಶ್ರೀ "ಓಂ" ಬ್ರಾಂಡ್ ಜೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಶ್ಲೇಷಕರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದರಿಂದ ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾರಿಯಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ಶ್ರೀ ವೈದ್ಯನಾಥ ತೈಜಪಾಲ್

ಕಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ನ ಗೆ ಗ ಡ ಲು

ಲೇ—ಜಿ. ಬಿ. ರಾಮಯ್ಯ, ಮೈಸೂರು.

ಮೊದ್ದಣ್ಣ— (ಸಂಕಟದಿಂದ) ಸ್ವಾ ಏನಾ ಡಾಕ್ಟರೇ, ನಿನ್ನೇ ದಿವಸ ನನ್ನ ಹೆಂಡತಿ ಇಲಿಮರಿಯನ್ನು ನುಂಗಿದಳು. ಇದಕ್ಕೆ ಯಾವುದಾದರೂ ಔಷಧಿ ಇದ್ರೆ ತಿಳಿಸಿ.

ಡಾಕ್ಟರ್— ಹಾಗಾದರೆ, ಒಂದು ಬೆಕ್ಕಿನ ಮರಿಯನ್ನು ತಂದು ನುಂಗಿಸಿ.

ಂ ಂ ಂ

ಡಾಕ್ಟರ್— ನಾನು ಮದ್ದು ಕೊಟ್ಟು ಚಿಕಿತ್ಸೆ ಮಾಡಿದವರಲ್ಲಿ ನನ್ನನ್ನು ದೂಸ ಲುಳ್ಳವರು ಒಬ್ಬರೂ ಇಲ್ಲ.

ಒಬ್ಬ ರೋಗಿ— ಹೌದು, ಆ ಮಾತು ನಿಶ್ಚಯ. ಏಕೆಂದರೆ ಅವರು ಇಹಲೋಕ ದಲ್ಲೆಯೇ ಇಲ್ಲದಿರುವುದರಿಂದ ಅವರು ಹೇಗೆ ದೂಷಿಸುತ್ತಾರೆ.

ಂ ಂ ಂ

ಉಪಾಧ್ಯಾಯರು— ಲೋ ಕಿಟ್ಟ ಸುಳ್ಳಾಡದಿರುವ ಗಂಡಸಾರು ?

ಕಿಟ್ಟ—ಹರಿಶ್ಚಂದ್ರನು, ಸಾರ್.

ಉಪಾಧ್ಯಾಯ— ಸುಳ್ಳಾಡದಿರುವ ಹೆಂಗಸಾರು ?

ಕಿಟ್ಟ—ಸುಳ್ಳಾಡದೆ ಇರುವ ಹೆಂಗ ಸೇ ಇಲ್ಲ, ಸಾರ್.

ಂ ಂ ಂ

ಇಬ್ಬರು ಯಾತ್ರಿಕರು ಒಂದು ಹೋ ಟಲಿಗೆ ಹೋಗಿ ರಾತ್ರಿ ಮಲಗಲು ಸ್ಥಳವ ನ್ನು ಕೇಳಲು ಹೋಟಲು ಯಜಮಾನಿಯು ಒಂದು ಕೋಣೆಯನ್ನು ತೋರಿಸಿದಳು ಆ ಕೋಣೆಯನ್ನು ನೋಡಿ ಯಾತ್ರಿಕರ ಲ್ಲೊಬ್ಬನು

"ಈ ಹಂದಿಗಳ ಗೋಷ್ಟಿಯನ್ನೇ ನು ಕಿಗಲು ಕೊಡುವದು. ಇದಕ್ಕೆ ಬಾಡಿಗೆ ಎಷ್ಟು ?" ಎಂದು ಕೇಳಲು

ಆಕೆಯು—"ಒಂದು ಹಂದಿಗಾದರೆ ಒರದೂವರೆ ರೂಪಾಯಿ, ಎರಡು ಹಂದಿಗ ಳಿಗಾದರೆ ಎರಡೂವರೆ ರೂಪಾಯಿ" ಎಂ ದು ತಿಳಿಸಲು, ಮುಂದೆ ಮಾತನಾಡಲು ಅವಕಾಶವಿಲ್ಲದೆ ನುಮ್ಮಗಾದನು.

ಂ ಂ ಂ

ಪ್ರಯಾಣಿಕ—ಇಲ್ಲಿಂದ ತಂಕಾರಿ ಗೆ ಈ ಒಸ್ಸಿನಲ್ಲಿ ಪ್ರಯಾಣ ಮಾಡಲು ಛಾರ್ಜೆಷ್ಟು ಏಜೆಂಟರೇ ?

ಏಜೆಂಟು — ನಿಮ್ಮಿಬ್ಬರಿಗೂ ಸೇರಿ ಮೂರು ರೂಪಾಯಿಗಳು ಸ್ವಾಮಿ.

ಏನು ರೇಟು ಹೆಚ್ಚು ಮಾಡಿದಿರಿ ?

ಏಜೆಂಟ—ತಲೆ ಒಂದಕ್ಕೆ ಒಂದೂವ ರೆ ರೂಪಾಯಿ ಅದಕ್ಕೆ ಜಾಸ್ತಿ ಇಲ್ಲ ಕಡಿಮೆನೂ ಇಲ್ಲ ನೋಡಿ ನಿಮ್ಮಿಷ್ಟ.

ಪ್ರಯಾಣಿಕ—ನೀವು ಈಗ ಹೇಳಿದ್ದು ಸರಿಯಾದ ಛಾರ್ಜು.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ಅನುಕೂಲಗಳು ಹೆಚ್ಚಾಗಿರುವವು. ಯತ್ನಕಾರ್ಯವು ಸಿದ್ಧಿಸಿ ಉದ್ಯೋಗ ನೌಕರಿಯಿಂದ ಸ್ವಲ್ಪ ಹಣ ಸಿಕ್ಕತ್ತೆ.

ವೃಷಭ

ಸ್ಥಿತಿಗತಿಗಳು ಅಷ್ಟು ಹಿತಕರವಾ ಗಿರುವುದಿಲ್ಲ. ಮನಸ್ಸಿನ ಚಂಚಲತೆ, ಅ ಧೈರ್ಯ ಹೆಚ್ಚಾಗಿರುವುದು, ಆರ್ಥಿಕ ಮುಗ್ಗಟ್ಟು ಪೀಡಿಸುವುದು.

ಮಿಥುನ

ಧೈರ್ಯ ಸಾಹಸವೆಂದರೆ ನಿಮ್ಮದೇ ಸರಿ. ಕಷ್ಟಸುಖಗಳು ಹೇಗಿದ್ದರೂ ಚಿಂತೆಯಲ್ಲಿ ಕಾಲಕಳೆಯದೆ ಕಾರ್ಯ ನಡೆಸುವಿರಿ. ಒಳ್ಳೇ ಕಾಲವಾಗಿದೆ. ಹ ಣವನ್ನು ಕೀರ್ತಿಯನ್ನು ಗಳಿಸುವಿರಿ.

ಕರ್ಕಾಟಕ

ಮಧ್ಯಮ ಸ್ಥಿತಿ, ನಿಮ್ಮ ಸ್ವೋಮಾ ರ್ಜಿತನವನ್ನು ಬಿಡಬೇಕು. ಕಾರ್ಯ ತತ್ಪ ರರಾಗಿ ತಕ್ಕನುಟ್ಟಿಗೆ ಅನುಕೂಲಗಳಿವೆ

ಸಿಂಹ

ಕೆಲಸಗಳು ಕೈಗೂಡುವುವು. ಬಂ ಧು ಮಿತ್ರರಲ್ಲಿ ಅಧಿಕಾರ ವರ್ಗದಲ್ಲಿ ಮನ್ನಣೆ ದೊರೆಯುವುದು. ಆರೋಗ್ಯ ಚೆನ್ನಾಗಿದ್ದು ಸಾಂಪತ್ತಿಕ ಸ್ಥಿತಿ ಸು ಧಾರಿಸುವುದು.

ಕನ್ಯಾ

ಅನುಕೂಲಗಳು ಹೆಚ್ಚಾಗಿರುತ್ತವೆ. ಕೆಲಸಕಾರ್ಯ ಕೈಗೂಡುವುದು. ಮೂರು ದುಡ್ಡು ಕೈಗೆ ಬರುವುದು.

ತುಲಾ

ನಿಮಗೆ ಕಷ್ಟನಷ್ಟಗಳು ಕಡಮೆ ಯಾಗುವುದು ಸ್ವಲ್ಪ ಸುಖ ಸಂತೋ ಷ ದೊರೆಯುವುದು.

ವೃಶ್ಚಿಕ

ಅಂತಹ ಅನುಕೂಲಗಳೇನೂ ಇಲ್ಲ ಜಾಗರೂಕತೆಯಿಂದ ವರ್ತಿಸುವುದು ಒಳ್ಳೇದು.

ಧನು

ತಕ್ಕನುಟ್ಟಿಗೆ ಅನುಕೂಲವಾದ ದಿ ನಗಳಾಗಿದ್ದರೂ ಅನಾವಶ್ಯಕ ಚಂಚ ಲತೆ, ಮನಸ್ತಾಪಗಳಿವೆ.

ಮಕರ

ಸಾಂಪತ್ತಿಕ ಸ್ಥಿತಿ ಉತ್ತಮಗೊ ಳ್ಳುವುದು ಬಂಧು ಮಿತ್ರರಿಂದ ಲಾಭ ವಿದೆ ತಾಪತ್ರಯ ತಗ್ಗುವುದು.

ಕುಂಭ

ಅಂತಹ ಕಷ್ಟಗಳೇನೂ ಇರುವು ದಿಲ್ಲ. ವಿದ್ಯಾಕೌಶಲ್ಯ ಪ್ರದರ್ಶನಕ್ಕೆ ಬರುವುದು.

ಮೀನ

ಅನುಕೂಲಗಳಾಗುವುದು. ಕಷ್ಟಗ ಳು ಸುಳಿಯಾಗುವುದು ಕಣಕ್ಕೂ ಚಿಂತೆಗೆ ಇಲ್ಲ.

ಅಹಂಬ್ರಹ್ಮ

(ಒಂದೆವನು—ನಾನು)

೨. ನಾ ನು — ನೀ ನ ಲ್ಲ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ನಾನು ನಾನಲ್ಲ ! ನಾನು ನೀನೂ ಅಲ್ಲ ! ನಾನು ನಾನೇ ಆಗಿರುವೆನು. ಆದರೆ ಈ ನಾನು ಆ ನಾನಲ್ಲ !

ಈ ನಾನು ಕರ್ಮಿಯು—ಆ ನಾನು ಕರ್ತೃವು ! ಈ ನಾನು ಹುಟ್ಟಿ ಸಾಯುವವನು ಆ ನಾನು ಹುಟ್ಟು ಸಾವುಗಳ ತೊಡಕಿನಲ್ಲಿ ಸಿಕ್ಕಿರುವನನು ! ಈ ನಾನು ವ್ಯಕ್ತಿ. ಆ ನಾನು ಶಕ್ತಿ! ಈ ನಾನು ಸಾಕಾರನು. ಆ ನಾನು ನಿರಾಕಾರನು ! ಈ ನಾನು ಎಲ್ಲೆಲ್ಲಿಯೂ ಕಾಣಿಸುವವ ನು, ಆ ನಾನು ಎಲ್ಲರಲ್ಲಿಯೂ ಅಡಗಿರುವ ವನು ! ನಾವು, ರೂಪ, ಗುಣ ಕರ್ಮಗ ಳಿಂದ ಕೂಡಿದ 'ನಾನು' ಬೇರೆ ಬೇರೆ ಯಾದೆನು—'ಚೈತನ್ಯ' ನಾದ ನಾನು ಒಬ್ಬನೇ ಆಗಿರುವೆನು : ಅದುದರಿಂದ ನಾನು ನೀನಲ್ಲ.

ನನಗೂ ನಿನಗೂ ಭೂಮ್ಯಾಕಾಶಗಳ ಷ್ಟು, ಪೂರ್ವ ಪಶ್ಚಿಮಗಳಷ್ಟು, ಕತ್ತಲೆ ಬೆಳಕುಗಳಷ್ಟು, ಅಂತರವುಂಟು. ನಾನೇ ಹೆಚ್ಚು ! ನಾನು ಹೇಳಿದುದೇ ಸತ್ಯ ! ನಾನು ಮಾಡಿದ ದೇ ನ್ಯಾಯ ! ನನ್ನ ಸಮಾನರಾದವರ ಯಾರಾದರೂ ಉಂ ಟೇ ?

ಈ ಪ್ರಪಂಚದಲ್ಲಿ ಇದುವರೆಗೆ ಆಗಿ ಹೋದ, ಈಗ ಇಂದಿನ ಇಹ್ನು ಮುಂದೆ ಹುಟ್ಟುವ, ಮಾನವರು ಮಾತ್ರವಲ್ಲ— ಪ್ರತಿಯೊಂದು ಜೀವರಾಶಿಯಲ್ಲೂ ಈ 'ನಾನೇ ಹೆಚ್ಚು' ಎಂಬ ಭಾವನೆಯು ತುಂಬಿಕೊಂಡಿರುವುದು. ಪ್ರತಿಯೊಬ್ಬ ರಲ್ಲೂ ಆ 'ಚೈತನ್ಯ' ನ ಅಂಶವೇ ಅಡ ಗಿರುವುದರಿಂದಲೇ ಎಲ್ಲರೂ 'ನಾನು !' ಎಂದು ಹೇಳಿಕೊಳ್ಳುತ್ತಿರುವರೋ ? ಏ ನೋ ? ಆದರೆ ಈ 'ನಾನು' ಎಂಬುದು ಯಾವುದು ಎಂಬುದನ್ನು ಅರಿತುಕೊಳ್ಳ ದೆ ಹುಟ್ಟಿ, ಸಾಯುವ ಈ ಶರೀರವೇ 'ನಾನು' ಎಂದು ತಿಳಿಯುವುದರಿಂದ 'ಅಹಂ' ಕಾರಕ್ಕೆ ಅವಕಾಶವಾಯಿತು. ಅದರಿಂದ ನೀನು-ನಾನು ಎಂಬ ಭೇದವು ಹುಟ್ಟಿತು.

ನಾನು ಶಿವ-ನೀನು ಕೇಶವ; ನಾನು ಶೈವ-ನೀನು ವೈಷ್ಣವ; ನಾನು ಅದ್ವೈತಿ-ನೀನು ದ್ವೈತಿ; ನಾನು ಹಿಂದೂ-ನೀನು ಮುಸಲ್ಮಾನ್; ನಾನು ಲಕ್ಷಾಧೀಶ-ನೀನು ಭಿಕ್ಷಾಧೀಶ; ನಾನು ಸುರೂಪಿ-ನೀನು ಕುರೂಪಿ; ನಾನು ಬಲಶಾಲಿ-ನೀನು ಬಲ ಹೀನ; ನಾನು ಸರ್ವಜ್ಞ—ನೀನು ಅಜ್ಞ ನಾನು ಪರೋಪಕಾರಿ- ನೀನು ಮೋಸ ಗಾರ; ನಾನು ತಂದೆ-ನೀನು ಮಗ; ನಾ ನು ಯಜಮಾನ-ನೀನು ಜವಾನ; ನಾನು ಗಂಡ-ನೀನು ಹೆಂಡತಿ; ನಾನು ದೊಡ್ಡ ವನು, ನೀನು ಚಿಕ್ಕವನ ; ನಾನು ಸದಾ ಚಾರಿ-ನೀನು ದುರಾಚಾರಿ ; ನಾನು ಗು ರು-ನೀನು ಶಿಷ್ಯ; ನಾನು ಬೆಳಕು-ನೀನು ಕತ್ತಲೆ; ನಾನು ಪ್ರಥಮ ಪುರುಷ-ನೀನು ದ್ವಿತೀಯ ಪುರುಷ; ನಾನು 'ಆ' ಕಾರ ನೀನು 'ಈ' ಕಾರ !

ಎಲ್ಲೆಲ್ಲಿಯೂ ಈ ವಿಧಗಳಾದ ಜಾ ತಿಭೇದ, ಮತಭೇದ, ಗುಣಭೇದ, ವರ್ಣ ಭೇದ ಕರ್ಮಭೇದ ತತ್ವಭೇದಗಳ ಕೂ ಗೇಳಿಕೆಗಳು ತುಂಬಿರುವುದು. ಈ ಕೂಗಾಟದ ಪ್ರಪಂಚವು !

ಇವುಗಳಿಂದ ದೂರವಾಗಿರುವವನೇ ನಾನು ! ನನ್ನನ್ನು ಅರಿಯುವೆನೆಂದು ಹೊ ರಟ ಬ್ರಹ್ಮನು ಬರಿದೆ ಭಟ್ಟನಾದನು. ಇ ದಕ್ಕಾಗಿಯೂ ಅದು ಸಾಧಿಸಲೇ ಇಲ್ಲ ಶ್ರುತಿಗಳು ಸ್ಮೃತಿಗಳಲ್ಲಿಯೇ ಮುಕ್ತಾಯ ವಾದುವು ! ಪುರಾಣಗಳ ಮಾತು ಹಾಗಿ ಯೇ ಉಳಿಯಿತು

'ನಾನು' ಸರ್ವಾಂತರ್ಯಾಮಿಯ ಈ ಮಾಯಾಜಾಗದ ವೇಷಧಾರಿಗಳ ಅಂತರ್ಯಾಮಿಯಾದ ಸೂತ್ರಧಾರನಾ ಎಲ್ಲರನ್ನೂ ಕಾಣಿಸುತ್ತಿರುವೆನೇ ನಾನು

ನೀನು ಕೇವಲ ಅಜ್ಞಾಧಾರಕನಾ ನಾನು ಹೇಳಿದಂತೆ ಕೇಳುವದಷ್ಟೇ ನಿ ಕೆಲಸ ನಾನು ನೀನಲ್ಲ ! ನೀನೊಂ ಶಬ್ದಗ್ರಾಹಕಯಂತ್ರ ವಿದ್ದಂತೆ ! ನಾ ಪ್ರೇರಿಸಿದುದನ್ನು ನೀನು ಬರೆಯು ನಾನು ಹೇಳಿದುದನ್ನು ನೀನು ಮಾಡ

'ನಾನು' ಎಂಬ ಅಹಂಕಾರನ ಬಿಡು 'ನಾನು' ಯಾರೆಂಬುದ ಯೋಚಿಸು ನೋಡು, ಅಹಂಕಾರ ವ ಕಾರಗಳನ್ನು ಸುಡು. ವಿಚಾರಮಾ , ನಾನು ನಾನಲ್ಲ ! ನಾನು ನೀ ಅಲ್ಲ ! ನಾನು ನಾನೇ ಆಗಿರುವೆನು.

(ಮುಂದುವರಿಯುವ

ಮುಂದಿನವಾರ: ನಾನು ಯಾರ

ತಪ್ಪದೆ ಓದಿರಿ!

ಅಡ್ಮಿರಲ್ ಡಾಲ್ಫಾರನ ಕೊಲೆ ಮಾಡಲ್ಪಟ್ಟಿದ್ದಾ

ಮೊನ್ನೆ ಮಧ್ಯಾಹ್ನ ಆಲ್‌ಜಿ ಸ್ಸ್‌ನ ಹೈ ಕಮಿಷನರ್ ಕಚೇ ಯಲ್ಲಿ ಆಗಂತುಕನೊಬ್ಬನು ಅ ರಲ್ ಡಾಲ್ಫಾರನ ಮೇಲೆ ಡು ಹಾರಿಸಿದನು

ವಿದೇಶ . ಹಿಂದೂದೇಶ

ಈ ವಾರ ಫ್ರೆಂಚ್ ಲವಾಲರು ಜರ್ಮನಿಗೆ ಹೇಗಿ, ಮುಂದೆ ಹೇಗೆ ಜರ್ಮನಿಗೆ ಸಹಾಯ ಮಾಡಬೇಕೆಂದು ಆಲೋಚಿಸುವರು.

ಇದುವರಿಗೆ ಸಾಲವರ್ಷದಲ್ಲಿ ಜಪಾನರ 640 ನಿವಾಸಗಳು ನಾಶಹೊಂದಿವೆ.

ಆಸ್ಟ್ರೇಲಿಯಾದಲ್ಲಿ ಸಾಲ ಎತ್ತಲು 150 ಕೋಟಿ ರೂಪಾಯಿ ಬಹು ಬೇಗನೆ ವಸೂಲಾಯಿತು.

ಇನ್ನು ಮುಂದೆ ಎ. ಆರ್. ಪಿ. ಇಲಾಖೆಯನ್ನು ಇಂಗ್ಲೆಂಡಿನಲ್ಲಿ ಖಾಯಮಾಗಿ ಮಾಡುವಂತೆ

ಸ್ಪೇಯಿನಿನ ಮಾಜಿ ಪ್ರಧಾನರೂ ಮತ್ತು ವಿದೇಶಾಂಗ ಮಂತ್ರಿಯೂ ಆದ ಎಂ. ನೀಗ್ರಿನ್ ಅವರು ಜನರಲ್ ಈಸೇನ್‌ಹವರ್ ಒಡನೆ ಜರ್ಚೆ ನಡೆಸಿದರೆಂದು ಇದು ಸ್ಪೇಯನಿನ ಮೇಲೆ ಜರ್ಮನಿಯ ದಂಡಯಾತ್ರೆ ನಡೆಯುವ ಸಂದರ್ಭದ ವಿಚಾರವಿರಬಹುದೆಂದೂ ಊಹಿಸಲಾಗಿದೆ.

ಸ್ಪೇಯಿನ್ ಮತ್ತು ಪೋರ್ಚುಗಲ್ ಗಳು ತಟಸ್ಥರಾಗಿರಬೇಕೆಂದೂ ಪರಸ್ಪರ ಸೌಹಾರ್ದವನ್ನು ಸಾಧಿಸಬೇಕೆಂದೂ ಅದಕ್ಕಾಗಿ ಸ್ಪೇಯಿನ್ ವಿದೇಶಾಂಗ ಮಂತ್ರಿಯು ಪೋರ್ಚುಗಲ್ಲಿಗೆ ಒಂದಿರುವರೆಂದೂ ತಿಳಿಯಲಾಗಿದೆ.

ವಿಷಿ ಸರಕಾರಕ್ಕೂ ದಕ್ಷಿಣ ಅಮೇರಿಕಾ ಸಂಸ್ಥಾನಗಳಿಗೂ ಹಿರಿವ ಬಾಂಧವ್ಯತೆಯು ಕೊನೆಗೊಂಡಿತು.

ಉತ್ತರ ಆಫ್ರಿಕಾದಲ್ಲಿ ಎರಡೂ ಪಕ್ಷಗಳೂ ತಮ್ಮ ತಮ್ಮ ಸಾಧನಗಳನ್ನು ಮೆಡಜೆಸ್-ಎಲ್-ಬಾಬಿಗೆ ಒದಗಿಸಿಕೊಳ್ಳುತ್ತಿದ್ದಾರೆ. ಇಟಲಿಯವರು ಟ್ಯೂನಿಷಿಯದೊಳಕ್ಕೆ ಸುಯುಕ್ತಿದ್ದಾರೆ

ಶತ್ರುಗಳ ಸೈನ್ಯಗಳು ಟ್ರಿಪೊಲಿ ಪ್ರಾಂತ್ಯದಲ್ಲಿ ಇನ್ನೂ ದೃಢವಾಗಿಯೇ ಇವೆ ಮಿತ್ರ ವೃಂದದವರು ಸುಮಾರು 70 ಮೈಲಿ ನಾಫಿಲಿಯ ಕಡೆಗೆ ಮುಂದುವರಿದಿದ್ದಾರೆ. ಶತ್ರುಗಳ ಮೇಲೆ ಒಂದೇ ರೀತಿ ಒತ್ತಡವನ್ನು ಕೊಡಲಾಗುತ್ತಿದೆ

ಅಮೇರಿಕಾ ಪ್ರಸಿಡೆಂಟ್ ರೂಸ್‌ವೆಲ್ಟರಿಗೆ ಆ ದೇಶದ ಪ್ರಸಿದ್ಧ 75 ವರ್ಷದ ಸ್ತ್ರೀಯರು ಒಂದು ಸಂಪೆ ಶವನ್ನು ಕಳುಹಿಸಿ ಅದರಲ್ಲಿ ಯಾವ ದೇಶದವರೂ ಇನ್ನೊಬ್ಬರ ಗುಲಾಮರಾಗಿರಕೂಡದು, ಎಲ್ಲರೂ ಅವರವರ ರಾಜ್ಯವನ್ನು ಅವರವರೇ ನೋಡಿಕೊಳ್ಳಬೇಕು, ಹೀಗಾದ್ದರೆ ತಾನೇ ಪ್ರಪಂಚದ ಶಾಂತಿ ಎಂದು ಕಾಣಿಸಿರುವರು.

ಸರಾಸರಿ ಪ್ರತಿದಿನವೂ ಒಂದಕ್ಕೆ ಕಡಮೆ ಇಲ್ಲದೆ ಶತ್ರು ನೌಕೆಯು ನೀರಿನ ಪಾಲಾಗುತ್ತಿರುವುದು.

ಇಂಡಿಯಾದಲ್ಲಿ ಕ್ಷಾಮ ತಲೆದೋರಿದೆ ಎಂದು ಹೇಳಲು ಯಾವ ಆಡ್ಡಿಯೂ ಇಲ್ಲ. ಬಿಜಾಪುರ ಡಿಸ್ಟ್ರಿಕ್ಟು ನೋಡಿದರೆ ಭಯಂಕರವಾಗಿದೆ. ಪ್ಲೇಗು ಕಾಲರಾ ಉಪದ್ರವಗಳಿಂದು ಸಾವಿರಾರು ಜನರು ಸತ್ತರು ತಿನ್ನುವುದಕ್ಕೆ ಆಹಾರವಿಲ್ಲ, ತೊಡುವುದಕ್ಕೆ ಬಟ್ಟೆಯಿಲ್ಲ. ಅಲ್ಲಿರುವ 5 ಲಕ್ಷ ಮಂದಿಗೆ ಬಟ್ಟೆ ಹಂಚಲು ಬೊಂಬಾಯಿ ಪ್ರಮುಖರು ಚಂದಾ ವಸೂಲ್ಮಾಡುತ್ತಿರುವರು.

ಇಂಡಿಯಾ ಚೈನಾ, ರಷ್ಯಾ ಈ ಮೂರು ರಾಜ್ಯದ ಪ್ರಜೆಯೇ ಪ್ರಪಂಚದ ಅರ್ಧ ಜನಾಂಗದವರು.

ನೆಲ್ಲೂರಿನಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಮದ್ರಾಸ್ ಗೌರ್ನರವರ ಅಡ್ವೈಸರಾದ ವಿ|| ರುವರ್ ಫರ್ಡ್‌ರವರು, ಆಹಾರ ಸಾಮಗ್ರಿಗಳ ಬೆಲೆ ಏರದಂತಿರಲು ಸರ್ಕಾರದವರು ತುಂಬಾ ಪ್ರಯತ್ನಿಸುತ್ತಿರುವರೆಂದು ಭರವಸೆ ಇತ್ತರು. ಸಣ್ಣ ಚಿಲ್ಲರೆ ನಾಣ್ಯಗಳ ಅಭಾವ ವಿಷಯದಲ್ಲಿ ಅವನ್ನು ಶೇಖರಿಸಿ ಮುಚ್ಚಿಡುತ್ತಿರುವವರನ್ನು ಸರಕಾರದೊಂದಿಗೆ ಸಹಕರಿಸಿ, ಜನರನ್ನು ಕಂಡು ಹಿಡಿದು ಶಿಕ್ಷಿಸಬೇಕೆಂದೂ ಚಿಲ್ಲರೆ ಹಣ ಹೆಚ್ಚಿಗಾಗಿ ಚಲಾವಣೆ ಬರುವುದೆಂದೂ ತಿಳಿಸಿದರು. ಅಕ್ಕಿ ಖರೀದಿ ಹೆಚ್ಚಿದಿರಲು ಅದನ್ನು ಕಡಮೆಯಾಗಿ ಉಸಯೋಗಿಸಬೇಕೆಂದು ಸಲಹೆ ಇತ್ತರು.

ಈಸ್ಟ್ ಗೋದಾವರಿಯ ಪಿಗಿರಿಲಾ ವೀರಭದ್ರಾಯರು ಕೋಕಿನಾಡ ಸಬ್ ಕೋರ್ಟಿಗೆ ಒಂದು ಕಾಗದ ಬರೆದು, ತಮ್ಮ ಎಂಡ ಕೇಸುಗಳಲ್ಲಿ ತಮ್ಮಂತೆ ಕೇಸನ್ನು ಫೈಸಲ ಮಾಡದಿದ್ದುದರಿಂದ ರೂ. 500 ನಷ್ಟ ಕೊಡಬೇಕೆಂದು ಇತ್ಯಾದಿ ಬರೆದರೆಂದು ಮದರಾಸು ಹೈ ಕೋರ್ಟಿನವರು ರೂ. ಜುಲ್ಮಾನೆ ವಿಧಿಸಿದವರು.

ಅಮೇರಿಕಾ ಸಂಸ್ಥಾನಕ್ಕೂ ಇಂಡಿಯಾಕ್ಕೂ ವ್ಯಾವಹಾರದ ಕೌಲು ನಡೆಯಿತು. ಇದರಿಂದ ಈ ದೇಶಗಳ ವ್ಯಾಪಾರಗಳಿಗೆ ಅನುಕೂಲವಾಯಿತು.

ದಕ್ಷಿಣ ಇಂಡಿಯಾದ ಒಂದು ಕಡೆ ಸಾವಿರಾರು ಸೈನಿಕರ ಸೈನ್ಯ ಶಿಕ್ಷಣ ನಡೆಯಿತು. ಜನರಲ್ ಸೇವಲ್ಲರು ದಕ್ಷಿಣ ಹಿಂದೂಸ್ಥಾದ ಸೈನಿಕರು ಯಾವ ರೀತಿ ತಯಾರಾಗಿರುವರೆಂಬುದನ್ನು ಪರೀಕ್ಷಿಸಿ ಸಂತೋಷಪಟ್ಟರು.

ವಿವಿಧ ವರ್ತಮಾನ

ಈಚೆಗೆ ಅಂದರೆ 3-4 ದಿನಗಳಿಂದ ಬೆಳ್ಳಿಯ ವಸ್ತು ಭಂಗಾರದ ಬೆಲೆಯು ಕಮ್ಮಿಯಾಗಿರುತ್ತದೆ ಕಾರಣ — ಅಮೇರಿಕಾದವರು ಬೆಳ್ಳಿಯನ್ನು ಲೀಸ್ ಎಂಡ್ ಲೆಂಡ್ ಮೇಲೆ ಕೊಡುವದಾಗಿದೆ

ಬರ್ಮಾದಲ್ಲಿ ಆಕಯಾಂಟಿಗೆ ಉತ್ತರ. ದಲ್ಲಿರುವ ಮಂಗಡಾ ಎಂಬ ಪಟ್ಟಣವನ್ನು ವಿತ್ರಮಂಡಲಿಯವರು ಜಪಾನರಿಂದ ಪುನಃ ಪಡೆದಿರುವರು. ಇದನ್ನು ನೋಡಿದರೆ ಜಪಾನಿಯವರಿಗೆ ಬರ್ಮಾದಲ್ಲಿ ಅಪಜಯ ಪ್ರಾರಂಭವಾಗಿದೆ

ಆರ್. ಎ. ಎಫ್. ವಿಮಾನಗಳಲ್ಲಿ ಫೋಟೋ ತೆಗೆಯುವವರೂ ಇರುತ್ತಾರೆ. ಎಂಥಾ ಕತ್ತಲೆಯಲ್ಲಿಯೂ 8000 ಅಡಿಯಿಂದ ಫೋಟೋ ತೆಗೆಯಬಹುದು. ಏಕ ಕಾಲದಲ್ಲಿ 12 ಚಮರನೈಲಿ ಫೋಟೋ ತೆಗೆಯುತ್ತಾರೆ. ಇದನ್ನು ಅಮೇರಿಕಾ ವಿಮಾನದಳದ ಕರ್ನಲ್ ಜಾರ್ಜ್ ಗಾಡರ್ಡರು ಕಂಡು ಹಿಡಿದಿರುವರು. ಇದು ಬಹಳ ರಹಸ್ಯವಾಗಿ ಆರ್. ಎ ಎಫ್. ಮತ್ತು ಅಮೆರಿಕಾ ವಿಮಾನದಳದವರಿಗೆ ಮಾತ್ರ ಗೊತ್ತು.

ಸಂಯುಕ್ತ ಪ್ರಾಂತ್ಯದಲ್ಲಿ ಈ ಸಾರಿ. ಅಗಾಧವಾಗಿ ಭತ್ತದ ಬೆಳೆಯಾಗಿರುವುದೆಂದೂ, 18,6500 ಟನ್ ದೊರೆಯಬಹುದೆಂದೂ ಹೇಳಲಾಗಿದೆ. ಅಂದರೆ ಕಳೆದ ವರ್ಷಕ್ಕಿಂತ ಶೇಕಡ 109 ರಷ್ಟು ಹೆಚ್ಚಂತೆ.

ಸರ್ಕಾರದವರೇ ತಮ್ಮದೊಂದು ಪತ್ರಿಕೆ ನಡೆಸಬೇಕೆಂದು ಸಿಂದ್ ಗೌರ್ನರವರು ಒಂದು ಕೂಟದಲ್ಲಿ ಮಾಡಿದ ಭಾಷಣದಲ್ಲಿ ಸಲಹೆ ಕೊಟ್ಟಿದ್ದಾರೆ.

ರಾಜನೀತಿ ಬಿಕ್ಷುಗಾರನಾಗಿರಲಿಲ್ಲ ರಾಜಗೋಪಾಲಾಚಾರ್ಯರು ! ಈಗು ಮನೆಮನೆಗೂ ಹೋಗಿ ಬೇಡುವ ಹಿಂದೂ ಸ್ಥಾನದ ಮುಖ್ಯ ಬಿಕ್ಷುಗಾರರಾಗಿರುತ್ತಾರೆ. ಇಂಥಾವರ, ಕಾಂಗ್ರೆಸ್ ಮುಖಂಡರಾಗಿದ್ದವರು ಪ್ರತಿಯೊಬ್ಬರ ಹತ್ತಿರ ಹೋಗುವುದು, ದೇಶದೇಶ ಸುತ್ತುವುದು ಇಂಗ್ಲೆಂಡಿಗೆ ಹೋಗುತ್ತೇನೆಂದು ಹೇಳುವುದು ನಾಚಿಕೆಯಲ್ಲವೆ. ಇದು ನಮಗೆ ನಾಚಿಕೆ.

ಚೈನಾ ಸೈನಿಕರು ಈಗ 50,00000 ಜನರಿರುವುದು. ಇನ್ನು 60,00000 ತರಬೇತರಾಗುತ್ತಿರುವುದು. ಇವರಲ್ಲಿ ಬಾಲಕರೇ ಹೆಚ್ಚು. ಇವರು 18 ವರ್ಷದವರು. ಅಲ್ಲದೆ 11 ರಿಂದ 14 ವರ್ಷದವರಗಿನವರೂ ಸೈನ್ಯದಲ್ಲಿ ಸೇರಿ ಸಹಾಯಕರಾಗಿ ತರಬೇತರಾಗುತ್ತಿರುತ್ತಾರೆ. ಸೈನ್ಯದಲ್ಲಿ ಹೆಂಗಸರೂ ಇರುತ್ತಾರೆ.

ಇಂಡಿಯಾದಲ್ಲಿ ಬಿತ್ತನೆಗೆ ಕಡಿನಾರನಂತೆ ಜೂನ್

ಮಾರ್ತಾರಂಗ

ಪಂಜಾಬು ಸಂಯುಕ್ತ ರಾಜ್ಯಕ್ಕೆ ಈ ರೀತಿ ಮಾಡಿ ಎಂದ ಶ್ರೀ ಕೆ. ಆರ್ ಮುನಸಿಯವರು ಹೇಳುತ್ತಾರೆ. ಪೂರ್ವ ಪಂಜಾಬ್ ಪಶ್ಚಿಮ ಪಂಜಾಬ್ ಎಂದು ಎರಡು ಭಾಗ ಮಾಡಿ ಪಶ್ಚಿಮ ಪಂಜಾಬ್‌ನಲ್ಲಿ ಶೇಕಡ 75 ರಂತೆ ಮುಸಲ್ಮಾನರಿರುತ್ತಾರೆ. ಪೂರ್ವ ಪಂಜಾಬ್‌ನಲ್ಲಿ ಹಿಂದೂಗಳು ಶೇಕಡ 43, ಶಿಕ್ಖರು ಶೇಕಡ 22 ರಂತೆ ಇರುತ್ತಾರೆ, ಸಂಯುಕ್ತ ಪ್ರಾಂತ್ಯಕ್ಕೆ ಸೇರಿಸಿ ಜಾಟ್‌ರನ್ನು ಒಟ್ಟುಗೂಡಿಸಿದರೆ ಶೇಕಡ 75 ರಂತೆ ಆಗುವುದು ಇಬ್ಭಾಗ ಮಾಡಲು ಡಾ|| ಮುಕರ್ಜಿ ಕೂಡ ನಿ|| ಜಿನ್ನಾರವರು ಒಪ್ಪಿಕೆ ಡಿದ್ದು ಈಗ ಬದಲಾಯಿಸಿರುತ್ತಾರೆ.

- ಜೈನಿಯರೂ ರಷ್ಯನರೂ ಯುದ್ಧದಲ್ಲಿ ತೊಡಗಿರುವ ಕಮಾಂಡರ್ ಹೆಸರನ್ನು ತಿಳಿಸುವುದಿಲ್ಲ. ಇವರು ಸತ್ತನಂತರವೇ ಗೊತ್ತಾಗುವುದು.

ಜರ್ಮನರು ಯುಕರೇನ ಪ್ರಾಂತ್ಯವನ್ನು ಗೆದ್ದರೂ ಗೋಧಿಯು ಸಿಗುವಹಾಗಿಲ್ಲ. ರಷ್ಯನರು ಒಂದು ತೃಣವನ್ನು ಗೋಧಿ ಬೆಳೆಯುವ ಪ್ರದೇಶದಲ್ಲಿ ಚೆಲ್ಲಿರುತ್ತಾರೆ. ಹೀಗೆ ಮಾಡುವುದರಿಂದ ಎಂಟು ವರ್ಷ ಪರ್ಯಂತ ಆ ಪ್ರದೇಶದಲ್ಲಿ ವ್ಯವಸಾಯವೇ ಆಗುವಹಾಗಿಲ್ಲವಂತೆ.

ಜಿನೋವಾ ಮತ್ತು ಸಾರ್ಡಿನಿಯ ಪರದ ಗೂಢಚಾರರೆಂದು ಕಂಡು ಬಂದ ಇಬ್ಬರು ಇಟಾಲಿಯನ್ನರಿಗೆ ರೋಂ ಪಟ್ಟಣದಲ್ಲಿ ಮರಣದಂಡನೆ ವಿಧಿಸಲಾಯಿತು. ಈ ಮರಣ ದಂಡನೆಗೊಳಗಾದ ಒಬ್ಬನ ಸಹೋದರನಿಗೂ ಮತ್ತೊಬ್ಬ ಇಟಾಲಿಯನ್ನನಿಗೂ ದೇಶದ ಗುಟ್ಟನ್ನು ಶತ್ರುಗಳಿಗೆ ಬೈಲು ಮಾಡುವರೆಂಬ ಆಪಾದನೆಗೆ ತಲಾ 30 ವರ್ಷ ಸೆಜಾ ವಿಧಿಸಲಾಯಿತು.

ಇನ್ನು 100 ವರ್ಷದಲ್ಲಿ ಇಂಗ್ಲೆಂಡಿನ ಪ್ರಜಾಸಂಖ್ಯೆ 500 00000ರಿಂದ 4000 0000ಕ್ಕೆ ಇಳಿಯುತ್ತದೆಂದು ಡಾಕ್ಟರು ಕಿಂಗ್ಸ್‌ಲಿರವರು ಹೇಳುತ್ತಾರೆ.

ಜೈನಾವಲ್ಲಿ ವ್ಯವಸಾಯಕ್ಕಾಗಿ ಕಾರ್ಮಿಕಸೇವೆಗಳಲ್ಲಾಗಲಿ ಇರುವ ಜನರ ತೆಗೆದುಕೊಳ್ಳದಿದ್ದರೂ, ಸೈನ್ಯಕ್ಕೆ ಇನ್ನು ವರ್ಷಕ್ಕೆ ಆಗುವಷ್ಟು ಸೈನಿಕರನ್ನು ವುದು.

ಚೈನಾದಲ್ಲಿ ಜಪಾನಿಯರ್ ದಳವಿರುತ್ತಾರೆ, ಅಂದರೆ ಈ ಲಕ್ಷ ಸೈನಿಕರಿರುವುದು ಬರ್ಮಾದ 5 ದಳ ಅಂದರೆ ಒಂದು ಲಕ್ಷ ಚೈನದಲ್ಲಿ ಜಪಾನಿಯ ನಾಲ್ಕು ಪ್ರಸಿದ್ಧ ಮಾಂಡರ್ ಇನ್‌ಛೀಫ್ ಇರುತ್ತಾರೆ

ಇಂಗ್ಲೆಂಡಿನ ದಾಂಪತ್ಯ ವಿಮಾಡಿಕೊಳ್ಳಲು ಎಂಭತ್ತಕ್ಕೆ ಒಂದು

ವರ್ತಮಾನ ಸಂಗ್ರಹ

ಹಿಟ್ಲರೊಂದಿಗೆ ಮಾತುಕತೆ ನಡೆಸಲು ಹೋಗಿದ್ದ ಫ್ರೆಂಚ್ ಲವಾಲರು ಪ್ಯಾರಿಸ್ಸಿಗೆ ವಾಪಸ್ಸು ಬಂದಿರುವರು.

ಮೊನ್ನೆ ಮಿ|| ಸ್ಟಾಲಿನ್ನರ 63ನೆ ವರ್ಧಂತ್ಯುತ್ಸವವು ಎಷ್ಟೋ ಕಡೆಗಳಲ್ಲಿ ಆಚರಿಸಲ್ಪಟ್ಟವು.

ರಷ್ಯದಲ್ಲಿ ಪ್ರತಿ ಕುಟುಂಬದಲ್ಲಿ ಹತ್ತು ವರ್ಷಕ್ಕೆ 30 ಜನನವಾಗುವುದು.

ಶತ್ರುಗಳು ತಮ್ಮ ಅಪಪ್ರಚಾರ ಕಾರ್ಯವನ್ನು ನಡೆಸಲು ಉಪಯೋಗಿಸುತ್ತಿರುವ ಸಾಧನಗಳ ಪೈಕಿ ಆಕಾಶವಾಣಿಯು ಬಹಳ ಸುಲಭ ಸಾಧ್ಯವಾದ ದಷ್ಟೆ? ಅದೇ ರೀತಿ ಅಕ್ಷರಾಭ್ಯಾಗಳಾದ ಜಪಾನಿ, ಜರ್ಮನಿ ಮತ್ತು ಇಟಲಿ ಇವು ಮೂರು ಈಗ ಭಾರತೀಯರ ಪ್ರಧಾನ ಭಾಷೆಯಾದ ಹಿಂದೂಸ್ಥಾನಿಯಲ್ಲಿ ಆಕಾಶವಾಣಿಯ ಮೂಲಕ ತಮ್ಮ ಅಪಪ್ರಚಾರ ಮಾಡುತ್ತಲಿವೆ.

ಮಿಡ್‌ವೇ ಮತ್ತು ಸಾಲಮೂ ಕದನಗಳಾದನಂತರ ಜಪಾನಿನ ಹೇರು ಬೆಲೆಗಳು ತುಂಬಾ ಇಳಿಮುಖವಾಗುತ್ತಿರುವುದರಿಂದ, ಷೇರ್ ಎಕ್ಸ್‌ಚೇಂಜುಗಳನ್ನು ಮುಚ್ಚಲು ಜಪಾನು ಸರ್ಕಾರವು ಆಜ್ಞೆ ಮಾಡಿದೆ.

ಈ ಯುದ್ಧವು ಆರಂಭವಾದಲಾಗಾಯ್ತು ಬ್ರಿಟನ್ನು ಇದುವರೆಗೆ ಒಂದು ಸಾವಿರದ ನೂರು ಕೋಟಿ ಪೌಂಡುಗಳಿಗಿಂತಲೂ ಹೆಚ್ಚಾಗಿಯೆ ವೆಚ್ಚಮಾಡಿದಂತಾಗಿದೆ.

'ಯುದ್ಧಕ್ಕೆ ಸಾಲಾಕೊಡಿ' ಎಂಬ ಅಮೇರಿಕಾ ಸರಕಾರದ ಪ್ರಯತ್ನಕ್ಕೆ ಅಲ್ಲಿಯವರು ಈ ತಿಂಗಳಲ್ಲಿ 10 000 ಮಿಲಿಯ ಡಾಲರ್ ಕೊಟ್ಟಿರುತ್ತಾರೆಂದೂ, ಈ ವರ್ತಮಾನವು ಆಕ್ಸಿಸ್ ರಾಷ್ಟ್ರಗಳಿಗೆ ಭಯಂಕರವಾದುದೆಂದೂ ಹೇಳಲಾಗಿದೆ.

ಇಟಲಿಯಲ್ಲಿ ಅಲ್ಲಲ್ಲೇ ದಂಗೆ ಏಳುತ್ತಿರುವರು.

ಸಂಸ್ಥಾನದ ವರ್ತಮಾನ

ಬೆಂಗಳೂರು ಆಶಕ್ತಪೋಷಕ ಸಭೆಗೆ ದಿವಾಣರವರ ಧರ್ಮಪತ್ನಿಯವರಾದ ಶ್ರೀಮತಿ ಸರಸಮ್ಮನವರು ಒಂದು ಸಾವಿರ ರೂ. ದಾನ ಮಾಡಿರುವರೆಂದು ತಿಳಿಯ ಒಂದಿದೆ.

ಹೊಳೇಸರೀಪ್ಪರದಲ್ಲಿ ಮೈಸೂರು ಬ್ಯಾಂಕಿನ ಶಾಖೆಯೊಂದು ಮುಂದಿನ ತಿಂಗಳು 2 ನೇ ತಾರೀಖು ತೆರೆಯಲ್ಪಡುವುದೆಂದು ತಿಳಿಯ ಬಂದಿದೆ

ಶಿವಮೊಗ್ಗಾ ಟೌನಿನಲ್ಲಿಯ ಮುಖ್ಯ ಕಡೆಗಳಲ್ಲಿ ಆಹಾರ ಪದಾರ್ಥಗಳ ಡಿಪೋವನ್ನು ತೆಗೆಯುವಂತೆ ಡೆಪ್ಟೀ ಕಮಿಷನರನ್ನು ಪ್ರಾರ್ಥಿಸಬೇಕೆಂದು ಕಳೆದ ಸೌರ ಸಭೆ ನಿಶ್ಚಯಿಸಿದ್ದು ತೀರ್ಮಾನಿಸಲಾಯಿತೆಂದು ಕೇಳುತ್ತೇವೆ.

ಮೈಸೂರು ವಿಶ್ವವಿದ್ಯಾನಿಲಯದ ಅಕ್ಯಾಡಮಿಕ್ ಕೌನ್ಸಿಲ್ಲಿನ ಮೀಟಿಂಗು 19 ನೇ ತಾರೀಖಿನ ದಿವಸ ನಡೆದು ಅನೇಕ ವಿಚಾರಗಳು ಪರಿಶೀಲಿಸಲಾಯಿತೆಂದು ಗೊತ್ತಾಗಿದೆ.

ಪ್ರಜಾಪ್ರತಿನಿಧಿ ಸಭೆಯ ಮೂರನೇ ಅಧಿವೇಶನವು ಸದ್ಯದ ಪರಿಸ್ಥಿತಿಯಿಂದ ನಡೆಯುಲು ಸಂಭವವಿಲ್ಲವೆಂದು ತಿಳಿಯ ಒಂದಿದೆ

ಮೈಸೂರಿನಲ್ಲೂ ಜನರ ಒಟ್ಟೇ ತಾತ್ಕಾಲಿಕ ತ್ಯಯವನ್ನು ನಿವಾರಿಸಲು 'ಸ್ಟಾಂಡರ್ಡ್' ಒಟ್ಟಿ ಒದಗಿಸುವ ಏರ್ಪಾಡಿನ ಬಗ್ಗೆ ಒಂದು ಸಭೆ ನಡೆಯಿತೆಂಬುದಾಗಿ ತಿಳಿಯ ಬಂದಿದೆ.

ಮೈಸೂರು ಸರ್ಕಾರದವರು ವರ್ತಮಾನ ಪತ್ರಿಕೆಗಳಿಗೆ ಮೈಸೂರು ಪೇಪರ್ ಮಿಲ್ಲಿನ ಕಲಾಡು ಸಂಬಂಧವಾದ ವಿಷಯದಲ್ಲಿ ನೋಡಿಕೊಳ್ಳಲು ನ್ಯೂಸ್ ಪ್ರಿಂಟ್ ಕಂಟ್ರೋಲರ್ ಆಗಿ ಒಬ್ಬ ಅಧಿಕಾರಿಯನ್ನು ನೇಮಿಸಿರುವರೆಂದು ತಿಳಿಯಬಂದಿದೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಶ್ರೀ ವಾಸ್ತಿವೆಂಕಟೇಶಯ್ಯಂಗಾರ್ಯರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ

ವಿವಿಧ ವರ್ತಮಾನ

ಚಿತ್ರದುರ್ಗದಲ್ಲಿ ಇಬ್ಬರು ವರ್ತಕರು ನವಣೆಯನ್ನು ಕಂಟ್ರೋಲರ ದರಕ್ಕಿಂತ ಹೆಚ್ಚು ದರಕ್ಕೆ ಮಾರಿದ ಅಪಾದನೆ ಮೇಲೆ ತಲಾ ರೂ 200 ಜುಲ್ಮಾನೆ ವಿಧಿಸಲಾಗಿದೆಯೆಂದು ತಿಳಿಯ ಒಂದಿದೆ.

ವಿದ್ಯಾಸಿಸ ಸಂಗೀತ ಸಮ್ಮೇಳನಕ್ಕೆ ಸಮರ್ಥ ವಿದ್ವಾಂಸರಾಜರವರು ರೂ. 100 ಸಹಾಯ ಮಾಡಿರುವದಾಗಿ ತಿಳಿಯಬಂದಿದೆ.

ಅಹಮದಾಬಾದಿನ ಮುನಿಸಿಪಾಲಿಟಿಯ ಹೊಸ ಸ್ಕೂಲ್ ಬೋರ್ಡಿನವರು ಮುನಿಸಿಪಲ್ ಕೆಲಸದ ಖಾಯಂ ಆಗಿರುವ 1000 ಮಂದಿ ಉಪಾಧ್ಯಾಯರನ್ನು ವಜಾಮಾಡಲು ನಿರ್ಧರಿಸಿರುವರು. ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹು ಕಡಮೆಯಾಗಿದ್ದು, 4 ತಿಂಗಳಿಂದ ಮುನಿಸಿಪಾಲಿಟಿ ಆಸ್ತಿ ಎಷ್ಟೋ ನಷ್ಟಪಡಿಸಲಾಗುತ್ತಿದ್ದರೂ ಪ್ರಜೆಗಳು ಏನೊಂದು ಪ್ರತಿಭಟನೆ ನಡೆಸದಿರುವುದೇ ಇದಕ್ಕೆ ಕಾರಣ. ಹಿಂದೆ ಆಗಿಲೇ 200 ಮಂದಿ ಉಪಾಧ್ಯಾಯರು ವಜಾ ಮಾಡಲ್ಪಟ್ಟಿದ್ದರು.

ಜಪಾನೀಯರು ಇಂಡಿಯಾದೊಳಗೆ 30 ಮೈಲಿಗಳಷ್ಟು ನುಗ್ಗಿದ್ದಾರೆಂದು ಪ್ಯಾರಿಸ್ ರೇಡಿಯೋ ತಿಳಿಸಿದ ವರ್ತಮಾನದ ವಿಷಯದಲ್ಲಿ ಅಮೇರಿಕಾ ನೌಕಾ ಸಚಿವರಾದ ಕ|| ನಾಕ್ಸರು, ಹೀಗೆ ಶತ್ರುಗಳು ಹೇಳುವದು ಮಿತ್ರರಾಷ್ಟ್ರಗಳಿಂದ ಉಪಯೋಗಕರವಾದ ವರ್ತಮಾನಗಳನ್ನು ಹೊರಕ್ಕೆಳಯುವದಕ್ಕಂದು ತಿಳಿಸಿದ್ದಾರೆ.

ಮೊನ್ನೆ ಬರ್ಲಿನ್ನಿನಲ್ಲಿ ಅಕ್ಷರಾಷ್ಟ್ರಗಳ ಮುಖಂಡರ ಸಮ್ಮೇಳನಾ ನಡೆದು ಯುದ್ಧ ಹೇಗೆ ಮುಂದುವರಿಸಬೇಕೆಂಬ ವಿಷಯದಲ್ಲಿ ಚರ್ಚೆ ನಡೆದು ಎಲ್ಲರೂ ಒಮ್ಮತ ಅಭಿಪ್ರಾಯ ಕೊಟ್ಟರಂತೆ. ಇಟಲಿಯ ಸಿಯನೋ ಜರ್ಮನಿಯ ರಿಬ್ಬನ್‌ಟ್ರಾಪ್ ಮುಂತಾದವರು ಹಾಜರಿದ್ದರು.

ಪತ್ರಿಕಾ ಹರತಾಳ

ಸರಕಾರ ಮತ್ತು ಅಖಿಲ ಭಾರತ ಪತ್ರಿಕಾಕರ್ತರ ಸಮ್ಮೇಳನಕ್ಕೆ ಆಗಿದ್ದ ಒಂದು ಒಪ್ಪಂದವನ್ನು ಮುರಿದು, ಕೆಲ ಪ್ರಾಂತಿಕ ಸರಕಾರದವರು ಹೊರಡಿಸಿರುವ ಆಜ್ಞೆಯನ್ನು ಪ್ರತಿಭಟಿಸಲು ಸಲುವಾಗಿ ಹಿಂದೂಸ್ಥಾನದ ಎಲ್ಲಾ ಪತ್ರಿಕೆಗಳು ಒಂದು ದಿನ ತಮ್ಮ ಪತ್ರಿಕೆ ಪ್ರಕಟಣೆ ನಿಲ್ಲಿಸಲು ಸ್ಥಾಟ್ಯಡಿಂಗ್ ಕಮಿಟಿ ತೀರ್ಮಾನಿಸಿದೆ. ಮುಂದೆ ಅಧ್ಯಕ್ಷರು ತಿಳಿಯಪಡಿಸುವ ದಿನದಲ್ಲಿ ಈ ರೀತಿ ಆಚರಣೆ ನಡೆಸಬೇಕೆಂದು ಪ್ರಕಟಿಸಲಾಗಿದೆ.

ಚಿಲ್ಲರೆ ಸಾಣ್ಯ

ಚಿಲ್ಲರೆ ನಾಣ್ಯಗಳ ಅಭಾವವನ್ನು ತಗ್ಗಿಸಲು ಇಂಡಿಯಾ ದೇಶದ ಎಲ್ಲಾ ಟಂಕಶಾಲೆಗಳು ಹೆಚ್ಚು ಕಾಲ ಕೆಲಸ ನಡೆಸುತ್ತಿವೆಯೆಂದೂ, ಉತ್ತರ ಇಂಡಿಯಾದಲ್ಲಿ ಹೊಸದೊಂದು ಟಂಕಶಾಲೆ ತೆರೆಯಲ್ಪಡುವುದೆಂದೂ ಇನ್ನು 8 ವಾರಗಳಲ್ಲಿ ಚಿಲ್ಲರೆ ದಾಸಾ ಲಭಿಸಬಹುದೆಂದೂ ಹೇಳಲಾಗಿದೆ.

ಭಾರತಕ್ಕೆ ಅಧಿಕಾರ ಒಪ್ಪಿಸಬೇಕು

ಪಕ್ಷರಹಿತ ಪರಿಷತ್ತಿನ ಮುಂದಾಳುಗಳು ಹೊಂಡಿಸಿರುವ ಪ್ರಕಟಣೆಯ ಸಾರಾಂಶ ಹೀಗಿದೆ— "ಬ್ರಿಟಿಷರು ಭಾರತದ ಗೆಳೆತನವನ್ನು ಗಳಿಸಬಹುದು. ಆದರೆ ಅದನ್ನು ಯಾತರಿಂದ? " 'ಇತಿಹಾಸದಲ್ಲಿಯೂ ಸಹ ಇಲ್ಲದಷ್ಟು ಸೈನ್ಯವನ್ನು ಭಾರತದಲ್ಲಿ ತಂದು ಇಟ್ಟಿದ್ದೇವೆ' ಎಂದು ಜಂಭ ಕೊಚ್ಚಿಕೊಳ್ಳುವುದರಿಂದಲ್ಲ. ಆದರೆ ಯುದ್ಧದ ಸಮಯದಲ್ಲಿ ಭಾರತೀಯರಿಗೆ ಹೆಚ್ಚಿನ ಅಧಿಕಾರಗಳನ್ನು ಒಪ್ಪಿ ಬ್ರಿಟಿಷರು ಭಾರತಕ್ಕೆ ನಿಜವಾದ ಸ್ವಾತಂತ್ರ್ಯವನ್ನು ಕೊಡುವರಿದ್ದಾರೆಂದು ಖಾತರಿ ಮಾಡಿಕೊಟ್ಟರೆ ಮಾತ್ರ ಗೆಳೆತನ ಗಳಿಸಬಹುದು'.

ಶಕ್ತಿ ಸಾಧನಕ್ಕೆ ಸುಲಭೋಪಾಯ

ಬ್ರಿಟಿಷ್

ಸೇವೆಯಿಂದು ನಿಮ್ಮನ್ನು ನಡೆಸಲ್ಲಿರಲಿ

ಈ ವಾರದ ಕಥೆ

ಮೀನಾಕ್ಷಿ ವಿಲಾಸ

(ಲೇಖಕರು—ಎಂ. ಪಿ. ನಾರಾಯಣ)

ಸುರಪುರದಲ್ಲಿ ಪುಟ್ಟಭಟ್ಟರ ಮನೆಯು ಸವಂಗಲಿಯಂತೆ ಕೊಳಿನ ಯಾಂಗಲ್ಯದಂತೆ ಇತ್ತು ಈಗ ಭಟ್ಟರಿಗೆ ಅಷ್ಟೇನೂ ವಯಸ್ಸಿಲ್ಲ ಸುಡುಗಾಡಿನ ನಡುದಾರಿ ವಿಾರಿದಾ್ದರೆ. ಇವರಿಗೆ 16 ನೇ ವಯಸ್ಸಿನಲ್ಲಿ ಮುದುವೆ ಆಯಿತು. ಹೆಂಡತಿ ವರ್ಷ ತುಂಬುವುದರೊಳಗಾಗಿ ತೀರಿಹೋದಳು. ಪುನಃ ಭಟ್ಟರು ಮದುವೆ ಆಗಿ 40 ವರ್ಷಗಳಾಯಿತು. ಆದರೇನು? ಎರಡನೆ ಹೆಂಡತಿಯು ಮಕ್ಕಳಿಲ್ಲದೆ ಸತ್ತು ಹೋದಳು. ಭಟ್ಟರ ಬಾಯಲ್ಲಿ ಒಂದು ಹಲ್ಲೂ ಇಲ್ಲ. ಛಿಳಿಯತಲೆ ಇವರು ಇನ್ನೊಂದು ಮದುವೆ ಆಗಬೇಕೆಂದು ಯೋಚಿಸಿದರು. ಪುಟ್ಟಭಟ್ಟರ ಹಿರಿಯರು ಸಂಪಾದಿಸಿದ ಆಸ್ತಿ ಜಾಸ್ತಿ ಇತ್ತು. ಇದರ ಮೇಲೆ ಜೋಡಿದಾರರು. ಇವರ ಆಸ್ತಿಗಳೆಲ್ಲಾ ಮುಂದೆ ಅನ್ಯರ ಪಾಲಾಗುವುದೆಂದು ಕಾಣುಸುಳ್ಳಿ ತ್ಯಾನುಭೋಗ ಲಕ್ಷ್ಮೀನರಸಯ್ಯನವರು ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿದರು.

ವಿಾನಾಕ್ಷಮ್ಮ ಮನೆಗೆ ಬಂದಳು. ಒಳ್ಳೇ ಸ್ವರೂಪವಿ ಎಲ್. ಎಸ್. ವರಿಗೆ ಓದಿದ್ದಳು. ಈಗಿನ ಕಾಲದ ಹೆಣ್ಣು ಬಣ್ಣದ ಬೀಸಣಿಗೆಯಂತೆ ನಡೆದರೆ ಬಳುಕುವಳು ಕತ್ತು ಬಹಳ ಕೆಳಗಿನವರೆಗೂ ಕಾಣಿಸುವಂತಹ ಜಾಕೆಟ್ ತೆನ್ನೆಯ ಹಗರವಾದ ಮೈ ಕಾಣಿಸುವಂತಹ ಸೀರೆಯನ್ನುಟ್ಟು ಎಡಗಡೆ ಭುಜದಮೇಲೆ ನೆರಿಗೆಯನ್ನು ನೆರಿಹಿಡಿದು ಪಿನ್ ಹಾಕಿಕೊಳ್ಳುತ್ತಿದ್ದಳು. ಏನಾಧರೇನು! ಭಟ್ಟರಿಗೆ ಹೆಣ್ಣು ಮಕ್ಕಳ ಕೈಲಿ ಇರುವ 'ಮಣ್ಣಿನ ಬಣ್ಣದ ಕಸಿಮಾವಿನ ಹಣ್ಣಿನಂತೆ' ಆಗಿತ್ತು! ವಿಾನಾಕ್ಷಮ್ಮನವರ ಕೃಪಾಕಟಾಕ್ಷ ಭಟ್ಟರ ಕಡೆ ತಿರುಗುವಂತಿಲ್ಲ. ಗಾಣಕ್ಕೆ ಕಟ್ಟಿದ ಎತ್ತು ವತ್ತು ಕೋಣಗಳಂತೆ ಪುಟ್ಟಭಟ್ಟರ ಮನೆಯು ಹಿಂದೆ ಮುದನೆಂಬ ಹುಡುಗ. ಮೈಸೂರು ಕಾಲೇಜಿನಲ್ಲಿ ಇಂಟರ್‌ನಲ್ಲಿ ಓದುತ್ತಿದ್ದ ಬೇಸಿಗೆ ರಜದಲ್ಲಿ ಸುರಪುರಕ್ಕೆ ಬಂದಿದ್ದನು. ವಿಾನಾಕ್ಷಿಯು ಪಿಕ್ಕಲಕಡೆ ಮಲ್ಲಿಗೆ ಹೂಬಿಡಿಸುವಾಗ ಈ ಯುವಕನ ದರ್ಶನವಾಯಿತು ನಾಗರೀಕ ತರುಣ ಇಬ್ಬರ ಪ್ರೇಮವೂ ಎಡಗಣ್ಣು ನೋಟದಿಂದಲೇ ಬೆಳೆಯಿತು

ವರದ—ನೀವು ಈ ಊರಿಗೆ ಹೊಸಬರಾಗಿದ್ದೀರಿ. ನಾನು ಹಿಂದಿನ ವರ್ಷ ಜುಲೈಯಲ್ಲಿ ಬಂದಾಗ ನೀವಿರಲಿಲ್ಲ.

ವಿಾನಾ—ನೀವೂ ಹೊಸಬರೆ ನಾನೂ ಈ ಊರಿಗೆ ಬಂದಾಗ ನೀವಿರಲಿಲ್ಲ

ಭಟ್ಟರು—ವಿಾನಾ. ಬಾಗಿಲು! ಬಾಗಿಲು!!

ವಿಾನಾ (ಗಾಬರಿಯಿಂದ) ಅಯ್ಯೋ ಹಾಳು ಮೂವೇವಿ ಊರಿಗೆ ಹೋಗಿ ಇನ್ನೂ ಮೂರು ದಿನ ಆಗಲಿಲ್ಲ ಆಗಲೇ ಬಂದಿರುವುದ..

ವರದ ಯಾರು? ನಿಮ್ಮ ಮನೆ ಆಳೋ! ಈಗ ಪುರಸತ್ತಿಲ್ಲವೆಂದು ಹೇಳು.

ವಿಾನಾ—ಅಲ್ಲ ಭಟ್ಟರು ಊರಿನಿಂದ.....

ವರದ—ಏನು ಮಾಡುವುದು! ನಾನು ಈ ಊರಿನಲ್ಲೇ ಇರುತ್ತೇನೆ ಬಂದರೆ.....

ಭಟ್ಟ—ಏನು ಮಾಡತ್ತಾಳೆ ಒಳಗೆ ಹಾಳು ಬಿಸಿಲು ಬೀರೆ ಸುಡುತ್ತೆ.

ವಿಾನಾ—ಛಂದೀ! (ಕರುಣೆಯನ್ನು ಒಳಗಿರಿಸಿ ರೂಂ ಬೀಗ ಹಾಕುವಳು).

ಭಟ್ಟ—ಹಸ್ಸಸ್ಸ! ನಾರಾಯಣಾ! ಹಾಳು ಬಿಸಿಲು ಬೆಳಿಗ್ಗೆ ಊಟ ಮಾಡಿ ಹೊರಡೂ ಹೊತ್ತಿಗೆ ಹೊತ್ತಾಯಿತು, ಇದೇನು ಮುಖನೆಲ್ಲ ಬೆವರಿದೆ ಒಟ್ಟೆಒರೆಯಲಾ ನಲುಗಿಹೋಗದೆ ಯಾಕೆ? ಏನು ಮಾಡತ್ತಿದ್ದೆ!

ವಿಾನಾ—ಅಯ್ಯೋ! ಆ ಹಾಳು! ಈ ಊರು ಗೂಳಿ ಬಸವ ನಮ್ಮ ಹಿತ್ತಲು ಗೋಡೆ ಹ್ಹಾರಿ ಒಳಗೆ ಬಂದು ನಮ್ಮ ಬಾಳೆಗಿಡವನ್ನೆಲ್ಲಾ ಅಲ್ಲಾಡು ಏಂತೆ ಮಾಡಿತು. ಅದು ಗುದ್ದಿರು ಹಾಕಿಕ್ಕೊಂಡು ಕಾಲು ಕೆರೆದುಕ್ಕೊಂಡು ನುಗ್ಗಿ ಆ ಬಟ್ಟೆ ಒಗೆಯುವ ಗಾರೆ ತೊಟ್ಟಿಯಲ್ಲಿ ನೀರು ಕುಡಿದು ಹೊರಕ್ಕೆ ಹೋಯಿತು. ನಾನು ಕಷ್ಟಪಟ್ಟು ಈ ಬಿಸಿಲಿನಲ್ಲಿ ಒಡಿಸಿದೆ ಆಷ್ಟರಲ್ಲೆ ಆ ಕಾಲೇಜ್ ಹುಡುಗ ಇಲ್ಲವೇ ವರದ ಅವರು ಒಂದು ನನಗೆ ತುಂಬಾ ಸಹಾಯ ಮಾಡಿದರು.

ಭಟ್ಟ—ಪಾಪ, ಆ ಹುಡುಗ ಯೋಗ್ಯ, ಪರೋಪಕಾರ ಲಕ್ಷಣ ತಿಳಿದವನು.

ಅಂಥ ತರುಣರೇ ನಮ್ಮ ದೇಶಕ್ಕೆ ಈಗ ಬೇಕಾದ್ದು. ಪಿತ್ತಲ ಗೂಂಡೆ ಇನ್ನು ಸ್ವಲ್ಪ ಎತ್ತರಿಸಬೇಕು ಆ ತೊಂಡು ದನಗಳ ಹಾವಳಿ ಕಡಿಮೆಯಾಗಬಲ್ಲದು.

ಅಂದು ಏಕಾದಶಿ ಯಾದ್ದರಿಂದ ಭಟ್ಟರು ಉಪವಾಸ ಪುರಾಣಕ್ಕಾಗಿ ಸಮೀಪದ ದೇವಸ್ಥಾನಕ್ಕೆ ಹೋಗಿದ್ದರು. ವರದ ವಿಾನಾಕ್ಷಿಯರು ಮಹಡಿಯ ಮೇಲೆ ಕೊಠಡಿಯಲ್ಲಿ ಸರಸಸಲ್ಲಾಪಗಳನ್ನಾಡುತ್ತಿದ್ದರು.

ಭಟ್ಟ—ಬಾಗಿಲು! ಬಾಗಿಲು!! ಎಂದು ಕೂಗಿದರು.

ವಿಾನಾ—ಒಳಗೆ ಹೊತ್ತು ವಿಾರಿ ಬಂದಿದ್ದೀರಿ. ಈ ದಿನ ಏಕಾದಶಿ ನೀವು ಈ ಬಾಗಿಲ ಹತ್ತಿರ ಕ್ಯಾನ್ವಾಸಿನ ಮೇಲೆ ಪವಡಿಸಿರಿ ನಾನು 'ಸಮುದ್ರ ಮಥನ' ಕಥೆಯನ್ನು ಅರ್ಧ ಓದಿ ಮುಗಿಸಿದ್ದೇನೆ ಅದನ್ನು ಪೂರ್ತಿ ಓದಿ.... ಇನ್ನು ನಾಳೆ ಬೆರೆ ಜಾಗ್ರತೆ ಅಡಿಗೆ ಆಗಬೇಕು ವಾರಣಿಗೆ.

ಭಟ್ಟ—ಭೇಷ್ ಎಲ್ಲಿ ಆ ಕಥೆ ಹೇಳು ನೋಡೋಣ.

ವಿಾನಾ—ಏನೇ ಬೇರು ಪರ್ವತವೇ ಕಡೆಗೋಲು ಸಮುದ್ರದಲ್ಲಿ ಕಮಲುದ ಪೊಗ್ಗುಗಳು. ಆನಂದ ಲಕ್ಷ್ಮಿಯ ಉದ್ಭವ. ಅಮೃತ ಜೀವನಾಧಾರದ ಉಗಮ ಮುಂದಕ್ಕೆ ಆಗವ ಫಲ ಫ್ರಾಪ್ತಿ ಇನ್ನು ತಿಳಿದಿಲ್ಲ.

ವಿಾನಾ—ಇನ್ನೂ ಮಲಗಿದ್ದೀರಾ! ಹೊತ್ತಿಗೆ ಮುಂಜೆ ಹೋಗಿ ನದಿ ಸ್ನಾನ ಮಾಡಿಕ್ಕೊಂಡು ಬನ್ನಿ, ನಾನು ಅಡಿಗೆ ಸಿದ್ಧಮಾಡುತ್ತೇನೆ.

ಭಟ್ಟ—ಇಗೋ ನಾನು ಈಗ ತಾನೇ ಕೋಳಿಕೂಗು ಕೇಳಿದೆ ನಾನು ಹೋಗುತ್ತೇನೆ ಭದ್ರವಾಗಿ ಬಾಗಿಲು ಹಾಕಿಕೋ; ಬೆಳಗಾಯಿತು ಅಂತ ಅಗುಳಿ ಹಾಕುವುದನ್ನು ಮರೆತೀಯೆ,

ವಿಾನಾ—ಪದೂ ತೊಲಗಿತು ಪ್ರಾರಬ್ಧ ಏನು! ಪುನಃ ಮಲಗಿದ ಹಾಗಿದೆ ನಾರಾಯಣನ ಯೋಗ ನಿದ್ರೆಯೋ!

ವರದ—ಹೌದು! ಲಕ್ಷ್ಮಿಯನೇಲಿನ ಭೋಗನಿದ್ರೆ.

ಉಪಯೋಗಕ್ಕೆ ಬಾರದ ವಸ್ತುಗಳನ್ನು ಬಿಸಾಡಬಾರದು

ಈಗಾಗಲೇ ಪ್ಯಾಟ್ಸ್‌ನಲ್ಲಿ ೬ ಲಕ್ಷ ಟನ್‌ಗಳಷ್ಟು ಹರಕು ಕಾಗದವನ್ನು ಸಂಗ್ರಹಿಸಿ ಅದರಿಂದ ಪುನಃ ಹೊಸವಾಗಿ ಕಾಗದವನ್ನು ಮಾಡಲಾಗಿದೆ.

ಅಮೇರಿಕದಲ್ಲಿ ಉತ್ಪತ್ತಿ

ಅಮೇರಿಕದಲ್ಲಿ ಸಂಗ್ರಾಮ ವಸ್ತುಗಳ ನಿರ್ಮಾಣಗಳು ಹೆಚ್ಚುತ್ತಿರುವುದಾಗಿ ಸೂಚಿಸಿದ್ದಾರೆ. 'ಇಂಗಾಟ' ಉಕ್ಕು ಮತ್ತು ಅಲ್ಯೂಮಿನಿಯಂ ಇವುಗಳ ಉತ್ಪತ್ತಿಯೂ ಕೂಡ ಒಳ್ಳೆ ಹೆಚ್ಚಾಗಿವೆಯೆಂದು ಅವರು ಸೂಚಿಸಿದ್ದಾರೆ.

ಇಟಲಿ ಜರ್ಮನಿಯ ಬಾಯಿಗೆ!

ಇಟಲಿ ದೇಶದ ಸಂಪತ್ತನ್ನು ಲೆಖ್ವಾ ಹಾಕಲು ಮತ್ತು ಇಟಲಿಯ ಮಿತ್ರಮಂಡಲಿಯಿಂದ ಮುತ್ಸಲ್ಪಟ್ಟರೆ, ಏನೇನು ಸಂಪತ್ತನ್ನು ಜರ್ಮನಿಗೆ ಸಾಗಿಸತಕ್ಕದ್ದೆಂದು ನಿರ್ಣಯಿಸಲು ಡಾ॥ ಸ್ಯಾಕ್ ಅಧ್ಯಕ್ಷತೆಯಲ್ಲಿ ಒಂದ ಸಮಿತಿ ಏರ್ಪಾಡಾಗಿದೆಯಂತೆ!

ನಟನಟಿಗಳ ಗ್ರಹಚಾರ

ಅಮೇರಿಕಾದಲ್ಲಿ ಇನ್ನು ಮುಂದೆ ಯಾವ ಸಿನಿಮಾ ನಟನಟಿಯರಿಗೆ ವರ್ಷಕ್ಕೆ ಎಂಭತ್ತು ಸಾವಿರ ರೂಪಾಯಿಗಿಂತ ಹೆಚ್ಚಾಗಿ ಸಂಬಳ ಕೊಡುವುದಿಲ್ಲವಂತೆ ಅಂದರೆ ತಿಂಗಳಿಗೆ ರೂಪಾಯಿ 6666-10-4 ಆದ ಹಾಗಾಯಿತು. ಯುದ್ಧಕಾಲ ಏನುಮಾಡುವುದು?

ಚುಟ್ಟಾ ಹಂಚಿಕೆ!

ಈ ಮೂರು ವರ್ಷದಲ್ಲಿ ನೌಕಾ ಇಲಾಖೆಯವರಿಗೆ 70000 000, ಸೈನ್ಯದವರಿಗೆ 83000 000, ಆರ್ ಎ. ಎಫ್ ರಿಗೆ 17000000 ಗಾಯಗೊಂಡವರಿಗೆ 20000 ಈ ಪ್ರಕಾರ ಆಂಗ್ಲೇಯರು ಚುಟ್ಟಾಗಳನ್ನು ಹಂಚಿರುತ್ತಾರೆ. ಇವರಷ್ಟೂ ಏತಕ್ಕೆ ವಿಕಕಾಲದಲ್ಲಿ ಸೇದಬಾರದಾಗಿತ್ತು. ಇಷ್ಟರ ಹೊಗೆಯೂ ಏಕಕಾಲದಲ್ಲಿ ಎದ್ದಿದ್ದ ಹಿಟ್ಲರ್ ಒಂದೇ ಗಳಿಗೆಯಲ್ಲಿ ಹಾರಿಹೋಗುತ್ತಿದ್ದನಲ್ಲವೆ?

ಪರದೆಯಿಂದ ವಿಮಾನಕ್ಕೆ

ಪ್ರಸಿದ್ಧ ಅಮೇರಿಕಾ ನಟಿ ಬ್ರೂಸ್ ಕಾಬಟ್ ವಿಮಾನಕ್ಕೆ ಸೇರುವಳಂತೆ ಮುಂದೆ ಇವಳು ಪರದೆಯ ಮೇಲಿಂದ ಅಂತರಕ್ಷದಲ್ಲಿಯೇ ಇರುವಳೆ?

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ನಿರಪ್

ವ್ಯಾಪಾರದ I T L ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ

ಸೇವಿಸಲು ರುಚಿಕರ
ಮತ್ತು ಬರುವ ಮೂಲಿಕೆಗಳ ಮಿಶ್ರಣವಿಲ್ಲ
ಸೇವಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಪಿಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ
ಮಲ್ಲೇಶ್ವರಂ, ಬೆಂಗಳೂರು.

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ, ಸೌಖ್ಯವೂ ದೊರೆಯಲು TG. ಮಾರ್ಕಿನ ಹಿಂಗನ್ನು ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪೆಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

ಉಪ್ಪಿನ ಟಾಕೀಸಿಗೆ ಬರಲಿರುವ

ಕಿಸಿಸೆ ನೀ ಕಹನದಲ್ಲಿ
ಪಹಾರಿಸನ್ಯಾಲ್ ಜೊತೆ
ಪಾತ್ರ ವಹಿಸಿರುವ
ಲೀಲಾಚಿಟ್ನಿಸ್

ಹಾಲು ಪಾನೀಯಗಳು
ನಮ್ಮಲ್ಲಿ ಒಂದು ವಿಶೇಷವೆನಿಸಿ
ಕೆನೆ, ಬೆಣ್ಣೆ, ಅತಿ ಮಧುರವಾದ ಕ್ರೀಮ್, ಇವುಗಳಿಗೆ
ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋಕ್ ಮಾಡಿ

ಸಿಟಿಸಿನ್ಸ್ ಡೈರಿ ಟೆಲಿಫೋನ್ ನಂಬರು 492
ಪಳೀಪೋಸ್ಟಾಫೀಸ್‌ರಸ್ತೆ, ಮೈಸೂರು

Marriage Gazette

The only illustrated monthly o urnal of its kind in India containing very interesting aud instructive articles on matrimonia-topics.
Apply ...

The Indian Marriage Gaxette
Bangalore City
— & —

Edited, Printed & published by M. S. Krishna Rao, at the Satyavadi Press, Chamaraja Agrahar, Mysore.

ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು
ಮಾಸಪತ್ರಿಕೆಗೆ
ಚಂದಾದಾರರಾಗಿರಿ
ವಾರ್ಷಿಕ ಚಂದಾ ರೂ. 2-4-0
ಬಿಡಿ ಪ್ರತಿ 4 ಆಣೆ.
ಕಾರ್ಯಾಲಯ ;
ಶ್ರೀ ವಾಸವಾಂಬ ಭವನ
ಅಶೋಕಾ ರಸ್ತೆ -- ಮೈಸೂರು

ಮಂಗಳೂರು ಸುವರ್ಣ

ಸ್ಪೆಷಲ್ ಬೀಡಿಯನ್ನೇ
ಉಪಯೋಗಿಸಿ. ಒಳ್ಳೇ ಸಿಪ್ಪಾನ್ಸ್ತಿಹೊ ಸೊಪ್ಪಿನಿಂದ ತಯಾರಿಸಿರುತ್ತೆ. ಒಂ ಪರ್ತಿ ಪರೀಕ್ಷಿಸಿ ನೋಡಿ.
ಮೈಸೂರು ಏಜೆಂಟರು, ಪಿ. ಮಂಜ
ಬೇರೆ ಸ್ಥಳಗಳಿಗೆ ಏಜೆಂಟರು ಬೇ

ಚಲನಚಿತ್ರ ಪ್ರಪಂಚಕೆಲ್ಲಾ ಅಖಿಲ ಕರ್ನಾಟಕದ ಹೆಮ್ಮೆಯ ವಾರ್ತೆ

ಹೆಚ್. ಆರ್. ಚಿ. ಸಿ. ಯವರ

ಶ್ರೀ ಪಿಕ್ಚರ್ಸ್

ಗಾಂಧಿ ಸ್ಕ್ವೇರ್, ಮೈಸೂರು ಇವರ

ಸಂಗೀತರತ್ನ ಆಸ್ಥಾನ್ ವಿದ್ವಾನ್ ಟಿ. ಚೌಡಯ್ಯನವರು
ಕಲ್ಚರ್ಡ್ ಕಮಂಡಿಯನ್ ಕೆ. ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರ

ತಾರಾಗಣ—ಶ್ರೀಮತಿ ಬಳ್ಳಾರಿ ಲಲಿತ, ಟಿ. ಎಸ್. ಚಂದ್ರ, ಕುಮಾರಿ ರತ್ನ, ಪಂಡರೀಬಾಯಿ, ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ವಿ. ಕೆ. ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್, ಹೆಚ್. ಆರ್. ಶಾಸ್ತ್ರಿ, ಎಂ. ಆರ್. ಪಿ. ಸಾರಥಿ, ಶ್ರೀಮತಿ ಕೆ. ಆರ್, ಶಾಂತಿರಾಜಮ್ಮ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ ಎದುರು ನೋಡಿ

ನಿರ್ದೇಶಕರು—ಜಿ. ಆರ್. ರಾಮಯ್ಯನವರು, ಸಂಗೀತ ನಿರ್ದೇಶಕರು—ಸಂಗೀತರತ್ನ ಟಿ. ಚೌಡಯ್ಯನವರು, ತಯಾರಿಕೆ—ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು—ಕೆ. ಹಿರಣ್ಣಯ್ಯ ಮತ್ತು ಎಂ. ಎಸ್. ಗೋಪಾಲ್. ಸ್ಟೂಡಿಯೋಸ್ ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

ಹೆಚ್ಚಿನ ವಿವರಗಳಿಗೆ—ಜಿ. ಆರ್. ರಾಮಯ್ಯ ... ಏಜೆಂಟ್ಸ್, ಇವರಲ್ಲಿ ತಿಳಿಯಿರಿ.